19. ಆದಾಯೋತ್ಪನ್ನ ಚಟುವಟಿಕೆಗಳ ತೊಡಗಲು ಅಂದರೆ ವ್ಯಾಪಾರ, ಉತ್ಪಾದನೆ ಅಥವಾ ವಾಣಿಜ್ಯ ಸೇವೆಗಳಿಗಾಗಿ ಬ್ಯಾಂಕಿನಿಂದ ಪಡೆದ ಸಾಲಕ್ಕೆ ಶೇ.6 ರ ಬಡ್ಡಿ ಸಹಾಯಧನ ನೀಡಲಾಗುವುದು.

**ಮೂಲಭೂತ ಅಭಿವೃದ್ಧಿ ಯೋಜನೆ**

**2623(3539); ಶ್ರೀ ಮಂಜುನಾಥ ಗೌಡ ಕೆ.ಎಸ್. (ಮಾಲೂರು)**

ಅ) ಕಳೆದ ಎರಡು ವರ್ಷಗಳಲ್ಲಿ ಕೋಲಾರ ಜಿಲ್ಲೆ ವ್ಯಾಪ್ತಿಯಲ್ಲಿ ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯ ವತಿಯಿಂದ ಕೈಗೊಂಡಿರುವ ಯೋಜನೆಗಳು ಯಾವುವು; ಈ ಪೈಕಿ ಅನುಷ್ಠಾನಗೊಂಡ ಯೋಜನೆಗಳು ಯಾವುವು (ತಾಲ್ಲೂಕುವಾರು ವಿವರ ನೀಡುವುದು):

ಆ) ಈ ಯೋಜನೆಗಳನ್ನು ಯಾವ ಯಾವ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗಿದೆ:

ಇ) ಇದಕ್ಕಾಗಿ ಮಂಜೂರಾದ ಅನುದಾನವೆಷ್ಟು (ತಾಲ್ಲೂಕುವಾರು ವಿವರ ನೀಡುವುದು):

ಈ) ನಗರ ಮತ್ತು ತಾಲ್ಲೂಕು ಕೇಂದ್ರ ಪ್ರದೇಶಗಳಿಗೆ ಕನಿಷ್ಠ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು?

**ಶ್ರೀ ಆರ್. ರೋಷನ್ ಬೇಗ್ (ಮೂಲಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರು)**

ಅ) ಕೋಲಾರದ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ರೈಲು ಬೋಗಿ ಕಾರ್ಖಾನೆ ಸ್ಥಾಪಿಸಲು ಯೋಜನಾ ವೆಚ್ಚದ ಶೇ:50 ನ್ನು ಭರಿಸಲು ಹಾಗೂ 1118.38 ಎಕರೆ ಭೂಮಿಯನ್ನು ಉಚಿತವಾಗಿ ನೀಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಆ) ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ

ಇ) ಈವರೆಗೆ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

ಈ) ಮೂಲಭೂತ ಅಭಿವೃದ್ಧಿ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ರೈಲ್ವೆ ಯೋಜನೆಗಳು
2. ವಿಮಾನ ನಿಲ್ದಾಣ ಯೋಜನೆಗಳು
3. ನಗರ ಅನಿಲ ಸಂಪರ್ಕ ಯೋಜನೆ
4. ಪಿಪಿಪಿ ಯೋಜನೆಗಳು

**ಆರ್.ಟಿ.ಇ. ಕಾಯ್ದೆಯಡಿ ಲಭ್ಯವಿರುವ ಸೀಟುಗಳು**

**2624(961); ಶ್ರೀ ಮೋಹಿಯುದ್ದಿನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ)**

ಅ) ಪ್ರಸಕ್ತ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆಯಡಿ ಮಂಗಳೂರು ತಾಲ್ಲೂಕಿನ ಶಾಲೆಗಳಲ್ಲಿ ಲಭ್ಯವಿದ್ದ ಸೀಟುಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಆ) ಈ ಕಾಯಿದೆಯಡಿ ಪ್ರವೇಶಾವಕಾಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಶಾಲಾವಾರು ವಿವರ ನೀಡುವುದು)

ಇ) ಪ್ರವೇಶಾವಕಾಶ ಪಡೆಯದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಪ್ರವೇಶಾವಕಾಶ ನೀಡದ ಶಾಲೆಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

ಈ) ಆರ್.ಟಿ.ಇ ಕಾಯಿದೆಯನ್ನು ಉಲ್ಲಂಘಿಸಿದ ಶಾಲಾ ಮುಖ್ಯಸ್ಥರುಗಳ ಮೇಲೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?